# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 80 |
| ಸದಸ್ಯರ ಹೆಸರು | ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 17.09.2021 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿನ ದಿನಗಳಲ್ಲಿ ಸಣ್ಣ ರೈತರಿಗೆ ಉಳುಮೆ ಮಾಡಲು ಎತ್ತುಗಳು ಸಿಗದೆ ತಾವೇ ಸ್ವತಃ ನೊಗಕ್ಕೆ ಹೆಗಲು ಕೊಟ್ಟು ಬಿತ್ತನೆ ಮಾಡುತ್ತಿರುವ ವರದಿಗಳು ದಿನ ಪತ್ರಿಕೆಗಳಲ್ಲಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪರಿಹಾರೋಪಾಯಗಳೇನು; (ವಿವರ ಒದಗಿಸುವುದು) | ಇತ್ತೀಚಿನ ದಿನಗಳಲ್ಲಿ ಸಣ್ಣ ರೈತರಿಗೆ ಉಳುಮೆ ಮಾಡಲು ಎತ್ತುಗಳು ಸಿಗದೆ ತಾವೇ ಸ್ವತಃ ನೊಗಕ್ಕೆ ಹೆಗಲು ಕೊಟ್ಟು ಬಿತ್ತನೆ ಮಾಡುತ್ತಿರುವ ವರದಿಗಳು ದಿನ ಪತ್ರಿಕೆಗಳಲ್ಲಿ ಬರುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ.<br>ಆದಾಗ್ಯೂ, ಕೃಷಿ ಇಲಾಖೆಯು ಎಲ್ಲಾ ವರ್ಗದ ಸಣ್ಣ ಭೂ ಹಿಡುವಳಿದಾರ ರೈತರಿಗೆ, ಉಳುಮೆ ಮಾಡಲು ಅನುಕೂಲವಾಗುವಂತೆ, ಸಣ್ಣ ಟ್ರ್ಯಾಕ್ಟರ್ ಹಾಗೂ ಅದಕ್ಕೆ ಪೂರಕವಾದ ಉಳುಮೆಗೆ ಉಪಯುಕ್ತವಾಗುವ ಯಂತ್ರೋಪಕರಣಗಳು, ಪವರ್ ಟಿಲ್ಲರ್, 1.5 HP ಯಿಂದ 9 HP ವರೆಗಿನ ಪವರ್ ವೀಡರ್ಸ್ (ಕಳೆ ತೆಗೆಯುವ ಯಂತ್ರ) ಗಳನ್ನು ಉಳುಮೆಗೆ ಅನುಕೂಲವಾಗುವ ಸಣ್ಣ ನೇಗಿಲು (ಎಂ.ಬಿ ಪ್ಲೋ), ಕಲ್ಟಿವೇಟರ್, ಕೇಜ್ ವೀಲ್, ಬಿತ್ತನೆ ಕೂರಿಗೆ ಮತ್ತು ಅಂತರ ಬೇಸಾಯ ಉಪಕರಣಗಳೊಂದಿಗೆ ಎಂಪ್ಯಾನಲ್ ಮಾಡಿ ಸಹಾಯಧನವನ್ನು ಈಗಾಗಲೇ ಒದಗಿಸಲಾಗುತ್ತಿದೆ. |
| ಆ) | ಈ ದಿನಗಳಲ್ಲಿ ಸಣ್ಣ ರೈತರುಗಳು ಎತ್ತುಗಳಿಗೆ ಮೇವನ್ನು ಒದಗಿಸಲಾಗದೆ ಸಾಕುತ್ತಿಲ್ಲದಿರುವುದರಿಂದ, ಇದರ ಬದಲಿಗೆ ಸರ್ಕಾರವೇ ತಾಲ್ಲೂಕಿಗೊಂದರಂತೆ ಪಶುಪಾಲನಾ ಕೇಂದ್ರುಗಳನ್ನು ತೆರೆದು ಗಟ್ಟಿಮುಟ್ಟಾದ ಎತ್ತಿನ ತಳಿಗಳನ್ನು ಬೆಳೆಸಿ, ಉಳುಮೆ ಕಾಲದಲ್ಲಿ ರೈತರಿಗೆ ಸಿಗುವಂತಹ ಕಾರ್ಯ ಮಾಡಲು ಸರ್ಕಾರದ ನಿಲುವೇನು? (ವಿವರ ಒದಗಿಸುವುದು) | ತಾಲ್ಲೂಕಿಗೆ ಒಂದರಂತೆ ಪಶುಪಾಲನಾ ಕೇಂದ್ರುಗಳನ್ನು ತೆರೆದು ಗಟ್ಟಿಮುಟಾದ ಎತ್ತಿನ ತಳಿಗಳನ್ನು ಬೆಳೆಸಿ, ಉಳುಮೆ ಕಾಲದಲ್ಲಿ ರೈತರಿಗೆ ಸಿಗುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br>ಬರಗಾಲ ಮತ್ತು ಪ್ರವಾಹದ ಪರಿಸ್ಥಿತಿಯಲ್ಲಿ ಮಾತ್ರ ರೈತರ ಬೇಡಿಕೆಗೆ ಅನುಸಾರ ಮೇವು ಬ್ಯಾಂಕ್ ಸ್ಥಾಪಿಸಿ ಮೇವನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು. |

**ಸಂಖ್ಯೆ: AGRI-ACT/125/ 2021**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು